# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ:09.12.2021 ರಂದು, ನಡೆದ ವಾರ್ಡ್ DETER ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 09.12.2021 ರಂದು ವಾರ್ಡ್ ಸಂಖ್ಯೆ 160ರ ಡಿಸೆಂಬರ್ ಮಾಹೆಯ ಮೊದಲನೇ **ವಾರ್ಡ್ DETER** ಸಮಿತಿ ಸಭೆ ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಭಾಗವಹಿಸಿದ್ದರು. ಸಭಾಧ್ಯಕ್ಷರಾದ ನೋಡಲ್ ಅಧಿಕಾರಿಗಳು ಬೇರೆಡೆಗೆ ವರ್ಗಗೊಂಡಿದ್ದು, ನೂತನ ನೋಡಲ್ ಅಧಿಕಾರಿಗಳ ನಿಯೋಜನೆಯಾಗದೇ ಇರುವುದರಿಂದ ಅವರ ಅನುಪಸ್ಥಿತಿಯಲ್ಲಿ ಸಭೆ ನಡೆಯಿತು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

- ಈ ಹಿಂದೆ ಇದ್ದ ನೋಡಲ್ ಅಧಿಕಾರಿಗಳು ಬೇರೆಡೆಗೆ ವರ್ಗಗೊಂಡಿರುವುದರಿಂದ ನೂತನ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲು ಕೋರುವಂತೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳೆಲ್ಲರೂ ಸದಸ್ಯ ಕಾರ್ಯದರ್ಶಿಗಳಿಗೆ ಮನವಿ ಮಾಡಿದರು.
- ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಸುರೇಶ್ ರವರು ಕೆಂಚೇನಹಳ್ಳಿ ಪ್ರದೇಶದಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಕೋರಿದರು ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಮುಂಬರುವ ಆರ್ಥಿಕ ಷರ್ದ ಅನುದಾನದಲ್ಲಿ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.
- ಐಡಿಯಲ್ ಹೋಮ್ಸ್ ವೆಲ್ಫೇರ್ ಅಸೋಸಿಯೇಶನ್ ಸಂಘದ ಸದಸ್ಯರಾದ ಶ್ರೀಮತಿ ವಿಜಯ ರವರು ಈ ಕೆಳಕಂಡ ದೂರು/ಅಹವಾಲು/ಕೋರಿಕೆಗಳನ್ನು ಸಲ್ಲಿಸಿದರು.

1. ಐಡಿಯಲ್ ಹೋಮ್ಸ್ ಬಡಾವಣೆಯ 3ನೇ ಮುಖ್ಯರಸ್ತೆ ಸಂಪೂರ್ಣ ಹಾಳಾಗಿದ್ದು, ಸಾರ್ವಜನಿಕರ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಕ್ರಮ ವಹಿಸಲು ವಾರ್ಡ್ ಅಭಿಯಂತರರಿಗೆ ಕೋರಿದರು.
2. ಪೌರ ಕಾರ್ಮಿಕರ ಕೊರತೆ ಇರುವುದರಿಂದ ರಸ್ತೆ ಗುಡಿಸುವ, ಕಸ ಸಂಗ್ರಹಿಸುವ ಕಾರ್ಯಗಳು ಸಕಾಲದಲ್ಲಿ ಆಗದೇ ಇರುವುದಕ್ಕೆ ಬೇಸರ ವ್ಯಕ್ತಪಡಿಸಿ ಹೆಚ್ಚುವರಿ ಪೌರ ಕಾರ್ಮಿಕರನ್ನು ನಿಯೋಜಿಸಿಕೊಳ್ಳಲು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲು ಕೋರಿದರು.
3. ಬೀದಿ ದೀಪ ದುರಸ್ಥಿಗೊಳಿಸಲು ಸಂಬಂಧಪಟ್ಟ ಅಭಿಯಂತರರ ಗಮನಕ್ಕೆ ತರಲು ದೂರವಾಣಿ ಕರೆ ಮಾಡಲಾಗಿ ಸಂಖ್ಯೆ ಅಸ್ತಿತ್ವದಲ್ಲಿಲ್ಲವೆಂದು ಬರುತ್ತಿರುವುದಾಗಿ ದೂರು ನೀಡಿದ ಹಿನ್ನೆಲೆಯಲ್ಲಿ ಹೊಸದಾಗಿ ಪಾಲಿಕೆಯ ವತಿಯಿಂದ ನೀಡಲಾಗಿರುವ ದೂರವಾಣಿ ಸಂಖ್ಯೆಯನ್ನು ನೀಡಿದರು.

- ಕೆಂಗೇರಿ ಟ್ರಾಫಿಕ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರವರು ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ತುರ್ತಾಗಿ ಮುಚ್ಚುದಿದ್ದಲ್ಲಿ ಅಪಘಾತ ಸಂಭವಿಸಬಹುದೆಂದು ದೂರು ನೀಡಿ ತುರ್ತಾಗಿ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಮನವಿ ಮಾಡಿದರು ಇಲ್ಲವಾದಲ್ಲಿ

➤ ಬಿಇಎಂಎಲ್ 5ನೇ ಹಂತದ ನಿವಾಸಿಯಾದ ಶ್ರೀಮತಿ ಸವಿತಾರವರು ಈ ಕೆಳಕಂಡ ದೂರು/ಅಹವಾಲು/ಕೋರಿಕೆ/ಸಲಹೆಗಳನ್ನು ಸಲ್ಲಿಸಿದರು.

1. ಕೆಂಪೇಗೌಡ ಜೋಡಿ ರಸ್ತೆಯಲ್ಲಿ ಬರುವ ಕಾಂತಿ ಸ್ವೀಟ್ಸ್ ನಿಂದ ಅರುಣಾಚಲಮ್ ರಸ್ತೆಯವರೆಗೆ ಹಾಳಾಗಿರುವ ರಸ್ತೆ ಬದಿ ಬೀದಿ ದೀಪಗಳನ್ನು ಅಳವಡಿಸಲು ಕಳೆದ ಐದು ವರ್ಷಗಳಿಂದ ಮನವಿ ಸಲ್ಲಿಸುತ್ತಿದ್ದರೂ ವಿದ್ಯುತ್ ಕೇಬಲ್‌ಗಳನ್ನು ಭೂಗತಗೊಳಿಸಲಾಗುತ್ತಿದೆಯೆಂದು ಹೇಳುತ್ತಿದ್ದು ಸಮಸ್ಯೆ ಪರಿಹಾರವಾಗಿರುವುದಿಲ್ಲವೆಂದು ತಿಳಿಸಿದರು. ಹಾಗೂ ಅಲ್ಲಿಯವರೆಗೆ ಹಾಳಾಗಿರುವ ವಿದ್ಯುತ್ ಕಂಬ ಹಾಗೂ ವಿದ್ಯುತ್ ಲೈಟ್ ಗಳನ್ನು ದುರಸ್ಥಿಗೊಳಿಸಲು ಕೋರಿದರು.
2. ಹಲಗೇವಡೇರಹಳ್ಳಿ ಮುಖ್ಯ ರಸ್ತೆ ಅಭಿವೃದ್ಧಿಪಡಿಸುತ್ತಿರುವುದರಿಂದ ಆ ರಸ್ತೆ ಮುಚ್ಚಲಾಗಿದ್ದು ಇದರಿಂದ ನೆಹರೂ ರಸ್ತೆ ಹಾಗೂ ಇನ್ನಿತರೆ ಒಳ ರಸ್ತೆಗಳಲ್ಲಿ ಹೆಚ್ಚಾಗಿ ವಾಹನಗಳು ಸಂಚರಿಸುತ್ತಿದ್ದು, ರಸ್ತೆಯ ಎರಡೂ ಬದಿ ವಾಹನಗಳನ್ನು ನಿಲ್ಲಿಸಿರುವುದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತಿದೆಯೆಂದು ದೂರು ನೀಡಿದರು ಇದಕ್ಕೆ ಪ್ರತಿಕ್ರಿಯಿಸಿದ ಸಬ್ ಇನ್ಸ್‌ಪೆಕ್ಟರ್ ರವರು ರಾಜರಾಜೇಶ್ವರಿ ನಗರಕ್ಕೆ ಒಂದೇ ಟೋಯಿಂಗ್ ವಾಹನ ಇರುವುದರಿಂದ ಒಮ್ಮೆ ಟೋಯಿಂಗ್ ಮಾಡಿದ ನಂತರ ಸಾರ್ವಜನಿಕರು ಮತ್ತೆ ಅದೇ ಸ್ಥಳದಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ತೊಂದರೆಯಾಗುತ್ತಿದೆಯೆಂದು ತಿಳಿಸಿ ಹೋಟೆಲ್, ಅಂಗಡಿ ಮುಂಗಟ್ಟುಗಳ ಮಾಲೀಕರುಗಳಿಗೆ 'ನಿಲುಗಡೆ ನಿಷೇಧಿಸಿದೆ' ಎಂಬ ನಾಮಫಲಕ ಅಳವಡಿಸಲು ಸೂಚಿಸಿ ಸಾರ್ವಜನಿಕರಿಗೆ ಹೋಟೆಲ್, ಅಂಗಡಿ ಮುಂಗಟ್ಟುಗಳ ಮುಂದೆ ವಾಹನ ನಿಲ್ಲಿಸದಂತೆ ಜಾಗರತಿ ಮೂಡಿಸಲು ತಿಳಿಸಲಾಗಿದೆಯೆಂದು ಪ್ರತಿಕ್ರಿಯಿಸಿದರು.
3. ಇಂದ್ರಪ್ರಸ್ಥ ಹೋಟೆಲ್ ಬಳಿ ಪಾದಾಚಾರಿ ಮಾರ್ಗದ ಮೇಲೆಯೇ ವಾಹನಗಳನ್ನು ನಿಲ್ಲಿಸಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಧರೆಯಾಗುತ್ತಿದ್ದು ಅಂಗಡಿ ಮಾಲೀಕರಿಗೆ ನೋಟೀಸ್ ನೀಡುವಂತೆ ಕೋರಿದರು.
4. ತಮ್ಮ ಪ್ರದೇಶದಲ್ಲಿ ಹೂವ ಮಾರುವ ಬಾಲಕಿಯೊಬ್ಬಳು ತಮ್ಮ ತಂದೆ ಸತ್ತಿದ್ದಾರೆಂದು ಪ್ರತೀ ದಿನ ಕಥೆ ಕಟ್ಟಿ ಹಣ ಪಡೆಯುತ್ತಿದ್ದು ಇದರ ಹಿಂದೆ ಬೇರೆ ಯಾರಾದರು ಇದ್ದು ಮುಗ್ಧತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದಾಗಿ ಸಂಶಯ ವ್ಯಕ್ತಪಡಿಸಿ ಸೂಕ್ತ ಕ್ರಮ ಕೈಗೊಳ್ಳಲು ಟ್ರಾಫಿಕ್ ವಿಭಾಗದ ಅಧಿಕಾರಿಗಳಿಗೆ ಕೋರಿದರು ಇದಕ್ಕೆ ಉತ್ತರಿಸಿದ ಅಧಿಕಾರಿಗಳು ಸದರಿ ವಿಷಯವಾಗಿ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಗೆ ದೂರು ನೀಡಲು ಸೂಚಿಸಿದರು.
5. ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ಕಸ ವಿಂಗಡಣೆ ಮಾಡದ ಮನೆಯವರು ಹಸಿ ಕಸ ಮತ್ತು ಒಣ ಕಸವನ್ನು ಖಾಲಿ ನಿವೇಶನಗಳಲ್ಲಿ ಹಾಕುತ್ತಿದ್ದು, ಯಾವ ಯಾವ ಮನೆಗಳಿಂದ ಕಸ ನೀಡುತ್ತಿಲ್ಲವೆಂದು ವಿವರ ಪಡೆಯಲು ಆಟೋ ಟಿಪ್ಪರ್ ಗಳ ಡ್ರೈವರ್‌ಗಳಿಗೆ ನಿರ್ದೇಶನ ನೀಡುವಂತೆ ಕೋರಿದರು ಹಾಗೂ ಇದರಿಂದ ಕಸದ ಸಮಸ್ಯೆಗೆ ಪರಿಹಾರ ದೊರೆಯುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.
6. ವಾರ್ಡ್ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ಅಂಗಡಿಗಳ ಮಾಲೀಕರಿಗೆ ಮತ್ತು ವ್ಯಾಪಾರಿಗಳಿಗೆ, ದಂಡ ವಿಧಿಸಲು ಹಾಗೂ ಪ್ಲಾಸ್ಟಿಕ್ ಬಳಕೆ ಮಾಡದಂತೆ ಜಾಗೃತಿ ಮೂಡಿಸಲು ಅಭಿಯಾನ ಹಮ್ಮಿಕೊಳ್ಳುವಂತೆ ಕೋರಲಾಯಿತು.

➤ ಐಡಿಯಲ್ ಹೋಮ್ಸ್ ಬಡಾವಣೆ ನಿವಾಸಿಯಾದ ಶ್ರೀಮತಿ ಸಾಧನಾ ಬದ್ರಿನಾಥ್ ರವರು ಈ ಕೆಳಕಂಡ ದೂರು/ಅಹವಾಲು/ಕೋರಿಕೆ/ಸಲಹೆಗಳನ್ನು ಸಲ್ಲಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿರುವ ಬ್ಲಾಕ್ ಸ್ಪಾಟ್ ಗಳನ್ನು ಗುರುತಿಸಿ ತೆರವುಗೊಳಿಸಲು ಕೋರಿದರು.
- ತಿಂಗಳಿಗೆ ಒಮ್ಮೆ ಮಾತ್ರ ವಾರ್ಡ್ ಸಮಿತಿ ಸಭೆ ಆಯೋಜಿಸುತ್ತಿದ್ದು, ಮೊದಲನೇ ಮತ್ತು ಮೂರನೇ ಶನಿವಾರ ಸಭೆ ಆಯೋಜಿಸಲು ಕೋರಿದರು.
- ಘನ ತ್ಯಾಜ್ಯ ನಿರ್ವಹಣೆಗೆ ಸಂಬಧಿಸಿದ ದೂರುಗಳು ಹೆಚ್ಚು ಇದ್ದು ಮುಂದಿನ ಸಭೆಗೆ ತಪ್ಪದೇ ಸ.ಕಾ.ಅ (ಘ.ತ್ಯಾ.ನಿ) ರವರನ್ನು ಆಹ್ವಾನಿಸಲು ಕೋರಿದರು.
- ರಸ್ತೆ ಬದಿ ಫುಟ್‌ಪಾತ್ ಹೋಟೆಲ್‌ಗಳ ಮಾಲೀಕರು ರಸ್ತೆಯಲ್ಲಿಯೇ ಪಾತ್ರೆಗಳನ್ನು ತೊಳೆಯುತ್ತಿದ್ದು, ಸ್ವಚ್ಛತೆ ಕಾಪಾಡಲು ಕ್ರಮ ವಹಿಸುವಂತೆ ಕೋರಿದರು ಹಾಗೂ ಪ್ರಸ್ತುತ ಕೋವಿಡ್ ಪರಿಸ್ಥಿತಿಯಲ್ಲಿ ಮುಂಜಾಗ್ರತಾ ಕ್ರಮ ವಹಿಸಿ ವ್ಯಾಪಾರ ಮಾಡಲು ಸೂಚಿಸುವಂತೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಪ್ಲಾಸ್ಟಿಕ್ ಸಮಸ್ಯೆ, ನಿಷೇಧಿತ ನಿಲುಗಡೆ ಸಮಸ್ಯೆ ಇನ್ನಿತರೆ ಸಮಸ್ಯೆಗಳಿಗೆ ಸ್ಪಂಧಿಸಲು "Volunteer ID card" ಮಾಡಿಸಿಕೊಡಲು ಕೋರಿದರು.
- ಮರದ ಎಲೆಗಳನ್ನು ವಿಲೇವಾರಿಗೊಳಿಸಲು ಈಗಾಗಲೇ ಲೀವ್ ಕಾಂಪೋಸ್ಟರ್ಗಳನ್ನು ಅಳವಡಿಸಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಲೀವ್ ಕಾಂಪೋಸ್ಟರ್ ಗಳನ್ನು ಅಳವಡಿಸಲು ಕೋರಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು 10 Mesh type ಲೀವ್ ಕಾಂಪೋಸ್ಟರ್ ಗಳನ್ನು ಇಂದೇ ತಂದು ಅಳವಡಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು ಹಾಗೂ ಅದರ ವೆಚ್ಚವನ್ನು ತಾವೇ ಭರಿಸುವುದಾಗಿ ತಿಳಿಸಿದರು.
- ಪಂತರಪಾಳ್ಯ ಇಂಡಸ್ಟ್ರಿಯಲ್ ಅಸೋಸಿಯೇಶನ್ ಸದಸ್ಯರು, ಸಲಾಪುರಿಯ ಅಪಾರ್ಟ್ ಮೆಂಟ್ ನಿಂದ ವೃಷಭಾವತಿ ನಾಲೆಯವರೆಗೂ ರಾತ್ರಿಯ ವೇಳೆ ಕಸ ಸುರಿಯುತ್ತಿದ್ದು ಈ ಬಗ್ಗೆ ಕ್ರಮ ವಹಿಸಿ ಮಾರ್ಷಲ್ಗಳನ್ನು ನಿಯೋಜಿಸಲು ಕೋರಿದರು. ಹಾಗೂ ಪಾಲಿಕೆಯ ಜಾಗದಲ್ಲಿ ಕಸ ಸುರಿಯುತ್ತಿದ್ದು ಶಾಶ್ವತ ಫೆನ್ಸಿಂಗ್ ಅಳವಡಿಸಲು ಕೋರಿದರು.
- ಐಡಿಯಲ್ ಹೋಮ್ಸ್ ಬಡಾವಣೆಯ 43ನೇ ಮುಖ್ಯರಸ್ತೆಯಲ್ಲಿ ರಸ್ತೆಯ ಒಂದು ಭಾಗ ಕುಸಿದಿದ್ದು ವಾಹನ ಸವಾರರು ಬೀಳುವ ಸಂಭವವಿರುವುದರಿಂದ ತುರ್ತಾಗಿ ದುರಸ್ಥಿಗೊಳಿಸುವಂತೆ ಹಾಗೂ ಬೆಸ್ಕಾಂ ವತಿಯಿಂದ ರಸ್ತೆ ಅಗೆದ ನಂತರ ಕೆಲವು ಕಡೆ ಮರುಪೂರಣಗೊಳಿಸದೇ ಹಾಗೆಯೇ ಬಿಟ್ಟಿರುವುದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು ಸರಿಪಡಿಸುವಂತೆ ಶ್ರೀಮತಿ ಸಾಧನಾ ರವರು ಕೋರಿದರು.
- ಹಲಗೆವಡೇರಹಳ್ಳಿ ಕೆರೆಗೆ ಅಪರೂಪದ ಪಕ್ಷಿಗಳು ಬರುತ್ತಿದ್ದು ಫೆನ್ಸಿಂಗ್ ಹಾಳಾಗಿರುವ ಕಾರಣ ಬೀದಿ ನಾಯಿಗಳು ಪಕ್ಷಿಗಳನ್ನು ಹಿಡಿಯುವ ಸಂಭವವಿರುವುದರಿಂದ ಫೆನ್ಸಿಂಗ್ ಅಳವಡಿಸಲು ಶ್ರೀಮತಿ ಸಾಧನಾ ರವರು ಕೋರಿದರು. ಹಾಗೂ ಹಲಗೆವಡೇರಹಳ್ಳಿ ಕೆರೆಯಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸುವಂತೆ ಕೋರಿದ ಮೇರೆಗೆ ಸದರಿ ವಿಷಯವು ಪಾಲಿಕೆಯ ಕೆರೆಗಳ ವಿಭಾಗದ ಅಧಿಕಾರಿಗಳ ಕಾರ್ಯ ವ್ಯಾಪ್ತಿಗೆ ಬರುವುದರಿಂದ ಸದರಿಯವರ ಗಮನಕ್ಕೆ ತರುವುದಾಗಿ ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು.

ಸಹಿ/–

ಸದಸ್ಯ ಕಾರ್ಯದರ್ಶಿಗಳು ವಾರ್ಡ್ DETER ಸಮಿತಿ
ವಾರ್ಡ್ ಸಂಖ್ಯೆ–160

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.